# 2ನೇ ತರಗತಿ, 1ನೇ ಮೈಲಿಗಲ್ಲು – ಕನ್ನಡ ಕಲಿಕಾಂಶಗಳು

## 1. ಚಿತ್ರವನ್ನು ಹೆಸರಿಸು 6

ಕೈಗಾಡಿ, ರೈಲು, ಟೈರು, ಕೈ










## 1. ಸ್ವರ ಚಿಹ್ನೆ ಪರಿಚಯ 7

ಸೂಚನೆ: * "ಐ" ಸ್ವರದೊಂದಿಗೆ ಸ್ವರ ಚಿಹ್ನೆಯ ಆಕಾರವನ್ನು ತಿಳಿಸುವುದು.
*ಸ್ವರ ಚಿಹ್ನೆಯನ್ನು ಪರಿಚಯಿಸಿ ಬರೆಯುವ ಕ್ರಮವನ್ನು ತಿಳಿಸಿ. ನಂತರ ನೋಟ್ ಪುಸ್ತಕದಲ್ಲಿ ಅಭ್ಯಾಸ ಮಾಡಿಸುವುದು.
* "ಐ" ಸ್ವರ ಚಿಹ್ನೆಯನ್ನು ವ್ಯಂಜನಾಕ್ಷರಗಳಿಗೆ ಹಚ್ಚಿ ಉಂಟಾಗುವ ಗುಣಿತಾಕ್ಷರಗಳನ್ನು ಓದಿಸಿ ಬರೆಯಲು ತಿಳಿಸುವುದು.




| | | | | |
|---|---|---|---|---|
| ಕೈ | ಖೈ | ಗೈ | ಘೈ | * |
| ಚೈ | ಛೈ | ಜೈ | ಝೈ | * |
| ಟೈ | ಠೈ | ಡೈ | ಢೈ | ಣೈ |
| ತೈ | ಥೈ | ದೈ | ಧೈ | ನೈ |
| ಪೈ | ಫೈ | ಬೈ | ಭೈ | ಮೈ |
| ಯೈ | ರೈ | ಲೈ | ವೈ | ಶೈ |
| ಷೈ | ಸೈ | ಹೈ | ಳೈ | * |

## 1. ಚಿತ್ರಪದ ಮತ್ತು ಸಾಧನಾ ಪದಗಳು 9

| | | | |
|---|---|---|---|
| ರೈಲು | ರೈತ | ಮೈಸೂರು | ನೈದಿಲೆ |
| ಕೈ | ತೈಲ | ವೈಭವ | ವೈಕುಂಠ |
| ಟೈರು | ಪೈಸೆ | ಕೈವಾರ | ಕೈಮರ |
| ಕೈಗಾಡಿ | ನೈಜ | ಕೈಕೆಸರು | ವೈಶಾಲಿ |
| ದೈವ | ಜೈಲು | ಕೈಕಡಗ | ಕೈಗಾರಿಕೆ |
| ಮೈಲಿ | ಮೈದ | ಬೈರವ | ಕೈಚಳಕ |
| ಪೈರು | ಕೈಲಾಸ | ಮೈಲಾರಿ | ರೈಲುಗಾಡಿ |
| ಹೈನು | ಸೈನಿಕ | ಜೈಕಾರ | ಕಾಲುಚೈನು |
| ದೈನಂದಿನ | ಕೈಕಾಲು | ಸೈಂದವ | ಸಂತೈಸು |

## 1. ಅಭ್ಯಾಸ ಪುಸ್ತಕ ( ಚಿತ್ರ ನೋಡಿ ಬಿಟ್ಟ ಅಕ್ಷರ ಬರೆ) 10

ಸೂಚನೆ:
ಅಭ್ಯಾಸ ಪುಸ್ತಕದಲ್ಲಿ ಚಿತ್ರ ನೋಡಿ ಬಿಟ್ಟ ಅಕ್ಷರ ಬರೆದು ಮೆಟ್ಟಿಲು ಸಂಖ್ಯೆ 10 ನ್ನು ಪೂರ್ಣಗೊಳಿಸುವುದು.

## 1. ಚಿತ್ರ ಸಹಿತ ವಾಕ್ಯ 11



ಐವರು ಗೆಳೆಯರು ರೈಲು ಗಾಡಿ
ಏರಿದರು. ಕೈಮರ ಮೇಲೇರಿತು.
ಚುಕು ಬುಕು ರೈಲು ಚಲಿಸಿತು.



ನಾವು ಸೈನಿಕರು
ದೇಶಕಾಗಿ ದುಡಿಯುವವರು.




ನಾವು ರೈತರು
ನಾವು ಜನರಿಗಾಗಿ ದುಡಿಯುವವರು
ಕಾಯಕವೇ ಕೈಲಾಸ ಎಂದು ನಂಬಿದವರು

## 1. ಅಭ್ಯಾಸ ಪುಸ್ತಕ (ಚಿತ್ರ ನೋಡಿ ವಾಕ್ಯ ಸರಿಪಡಿಸಿ ಬರೆ) 12

ಸೂಚನೆ:
ಅಭ್ಯಾಸ ಪುಸ್ತಕದಲ್ಲಿ ಮೆಟ್ಟಿಲು ಸಂಖ್ಯೆ 12 ನ್ನು ಪೂರ್ಣಗೊಳಿಸುವುದು.

## 1. ಪದಬಂಧ 13

ಸೂಚನೆ: *ಬಾಣದ ಗುರ್ತಿಗೆ ಅನುಗುಣವಾಗಿ ಪದಬಂಧದಲ್ಲಿರುವ ಅರ್ಥಪೂರ್ಣ ಪದಗಳನ್ನು ಗುರುತಿಸಿ ಓದಲು ತಿಳಿಸುವುದು.
*ಗುರುತಿಸಿದ ಪದಗಳನ್ನು ನೋಟ್ ಪುಸ್ತಕದಲ್ಲಿ ನಕಲು ಮಾಡುವುದು.



| | | | | |
|---|---|---|---|---|
| ಸೈ | ರ | ಣೆ | ಹೈ | ದ |
| ನಿ | ರೈ | ಕಾ | ಜೈ | ಲು |
| ಕ | ತ | ಲು | ಮೈ | ಲಿ |
| ಪೈ | ತೈ | ಚೈ | ಕೈ | ಬೈ |
| ಸೆ | ಲ | ನು | ಗಾ | ತ |
| ಬೈ | ರ | ವ | ಡಿ | ಲೆ |

## 1. ರೈತ ( ವಾಚಕ) 14

ರೈತನು ಭೂಮಿಯ ಉಳುತಿಹನು
ಬೆಳೆಯಲು ಹದವ ಮಾಡಿಹನು.

ಪೈರನು ನಾಟಿಯ ಮಾಡುವನು
ಮಳೆಯು ಬರಲು ಕಾಯುವನು.

ಸಾಗುತ ದಿನಗಳು ಉರುಳಿದವು
ಚಿಗುರುತ ಪೈರು ಬೆಳೆದಿಹವು
ತೆನೆಗಳು ಬಳುಕುತ ನಲಿದಿಹವು.

ಬಲಿತಾ ತೆನೆಗಳು ಬಾಗಿದವು
ತೆನೆಯನು ಕಣದಲಿ ಹಾಕಿದನು
ರಾಗಿಯ ಕಣವ ಮಾಡಿದನು.

ರೈತನು ರಾಗಿಯ ತೂರಿದನು
ಚೀಲಕೆ ರಾಗಿಯ ಹಾಕಿದನು.

ಅಂಗಡಿಗೆ ರಾಗಿಯ ಮಾರಿದನು
ಹರುಷದಿ ಹಣವನು ಎಣಿಸಿದನು.

ಓದಿದ ನಂತರ ನೋಟ್ ಪುಸ್ತಕದಲ್ಲಿ ಅಂದವಾಗಿ ಬರೆಯುವುದು.

## 1. ರೈಲು ಪ್ರಯಾಣ (ವಾಚಕ) 15

ಐವರು ಸೈನಿಕರು ಒಂದು ಬಾರಿ ಮೈಸೂರಿಗೆ ರೈಲು ಪಯಣ ಮಾಡಲು

ಈ ಐವರು ಸೈನಿಕರು ರೈಲು ಏರಿದರು. ಹಾದಿಯ ಎಡಗಡೆ ಹಸಿರು ಪೈರಿನ ಹೊಲ ಕಂಡರು. ಬಲಗಡೆ ಹರಿಯುವ ನೀರನು ಕಂಡರು.

ಅವರು ರೈಲಿನ ಒಳಗೆ ಖುಷಿಯಾಗಿ ಹಾಡಿ ಕುಣಿದರು. ಬಗೆ ಬಗೆಯ ತಿನಿಸುಗಳ ಸೇವಿಸಿದರು.

ನೂರು ಮೈಲಿ ಚಲಿಸಿ ರೈಲು ಮೈಸೂರು ತಲುಪಿತು. ಸೈನಿಕರು ಕೆಳಗೆ ಇಳಿದರು. ನೂಕುವ ಕೈಗಾಡಿಯ ಮೇಲಿರುವ ಮರದ ಆಟಿಕೆಗಳನು ಕಂಡರು.

ಸೈನಿಕರು ಅರಮನೆ ಕಾಣಲು ಬಂದರು. ಅರಮನೆಯ ಅಂದ ಚಂದ ಕಂಡರು. ಅದರ ವೈಭವ ಕಂಡು ಸೈನಿಕರು ಮೈಮರೆತರು.


ಸಂಜೆಗೆ ಆನೆ ಅಂಬಾರಿ ಕಾಣಲು ಅರಮನೆ ಮೈದಾನದ ಸಮೀಪ ಬಂದರು. ಅಂಬಾರಿ ಮೇಲೆ ಇರುವ ದೇವಿಗೆ ನಮಿಸಿದರು. ನಂತರ ಊರುಗಳಿಗೆ ತೆರಳಿದರು.

ಓದಿದ ನಂತರ ನೋಟ್ ಪುಸ್ತಕದಲ್ಲಿ ಅಂದವಾಗಿ ಬರೆಯುವುದು.

# 2ನೇ ತರಗತಿ, 2ನೇ ಮೈಲಿಗಲ್ಲು – ಕನ್ನಡ ಕಲಿಕಾಂಶಗಳು

## 2. ಚಿತ್ರವನ್ನು ಹೆಸರಿಸು 17


ಕೊಳಲು, ಬಾಳೆಗೊನೆ, ಮೊಲ, ಪೊರಕೆ






## 2. ಸ್ವರ ಚಿಹ್ನೆ ಪರಿಚಯ 18

ಸೂಚನೆ: * "ಒ" ಸ್ವರದೊಂದಿಗೆ ಸ್ವರ ಚಿಹ್ನೆಯ ಆಕಾರವನ್ನು ತಿಳಿಸುವುದು.
*ಸ್ವರ ಚಿಹ್ನೆಯನ್ನು ಪರಿಚಯಿಸಿ ಬರೆಯುವ ಕ್ರಮವನ್ನು ತಿಳಿಸಿ. ನಂತರ ನೋಟ್ ಪುಸ್ತಕದಲ್ಲಿ ಅಭ್ಯಾಸ ಮಾಡಿಸುವುದು.
* "ಒ" ಸ್ವರ ಚಿಹ್ನೆಯನ್ನು ವ್ಯಂಜನಾಕ್ಷರಗಳಿಗೆ ಹಚ್ಚಿ ಉಂಟಾಗುವ ಗುಣಿತಾಕ್ಷರಗಳನ್ನು ಓದಿಸಿ ಬರೆಯಲು ತಿಳಿಸುವುದು.




| | | | | |
|---|---|---|---|---|
| ಕೊ | ಖೊ | ಗೊ | ಘೊ | * |
| ಚೊ | ಛೊ | ಜೊ | ಝೊ | * |
| ಟೊ | ಠೊ | ಡೊ | ಢೊ | ಣೊ |
| ತೊ | ಥೊ | ದೊ | ಧೊ | ನೊ |
| ಪೊ | ಫೊ | ಬೊ | ಭೊ | ಮೊ |
| ಯೊ | ರೊ | ಲೊ | ವೊ | ಶೊ |
| ಷೊ | ಸೊ | ಹೊ | ಳೊ | * |

## 2. ಚಿತ್ರಪದ ಮತ್ತು ಸಾಧನಾ ಪದಗಳು 19

ಮೊಲ
ಪೊರಕೆ
ಕೊಳಲು
ಬಾಳೆಗೊನೆ
ಕೊಡ
ದೊರೆ
ನೊಣ

ಕೊಳ
ಹೊಂಗೆ
ಮೊರ
ಹೊಗೆ
ಹೊದಿಕೆ
ಕೊಡಲಿ
ಮೊಸಳೆ
ಕೊರಳು

ಸೊಗಸು
ಮೊಳಕೆ
ಮೊಸರು
ಬೊಂಬೆ
ಗೊಂಚಲು
ಉಡುಗೊರೆ
ಅಂದುಡೊಂಕು
ಜೇನುನೊಣ

ರೆಂಬೆ–ಕೊಂಬೆ
ತೊಂಡೆಕಾಯಿ
ಗೊಂಬೆಯಾಟ
ಹೊಂಚುಹಾಕು
ದೊಂಬರಾಟ
ಹೊಂದಾಣಿಕೆ

## 2. ಅಭ್ಯಾಸ ಪುಸ್ತಕ (ಚಿತ್ರ ನೋಡಿ ಬಿಟ್ಟ ಅಕ್ಷರ ಬರೆ) 20

ಸೂಚನೆ: ಅಭ್ಯಾಸ ಪುಸ್ತಕದಲ್ಲಿ ಮೆಟ್ಟಿಲು ಸಂಖ್ಯೆ 20 ನ್ನು ಪೂರ್ಣಗೊಳಿಸುವುದು.

## 2. ಚಿತ್ರ ಸಹಿತ ವಾಕ್ಯ 21



ಮರದ ಪೊಟರೆ.
ಮರದ ಪೊಟರೆಯೊಳಗೆ ಹಾವು ಇದೆ.



ತೆಂಗಿನ ಗರಿಯ ಪೊರಕೆ. ಕಸ ಗುಡಿಸಲು ಪೊರಕೆಯು ಬೇಕು



ಇವನು ರೈತ. ರೈತನು ಕೊಡಲಿಯಿಂದ ಒಣಗಿದ ಮರ ಕಡಿಯುವನು.



ಬಾಳೆಗಿಡ. ರೆಂಬೆಕೊಂಬೆಯಿರದ ಬಾಳೆಗಿಡ.
ಬಾಳೆಯ ಗಿಡದಲಿ ಬಾಳೆಗೊನೆ ಇದೆ.

ಸೂಚನೆ: ಮೇಲಿನ ವಾಕ್ಯಗಳನ್ನು ಕಲಿತ ನಂತರ ನೋಟ್ ಪುಸ್ತಕದಲ್ಲಿ ಬರೆಸುವುದು.

## 2. ಅಭ್ಯಾಸ ಪುಸ್ತಕ (ಚಿತ್ರ ನೋಡಿ ವಾಕ್ಯ ಸರಿಪಡಿಸಿ ಬರೆ) 22

ಸೂಚನೆ: ಅಭ್ಯಾಸ ಪುಸ್ತಕದಲ್ಲಿ ಮೆಟ್ಟಿಲು ಸಂಖ್ಯೆ 22 ನ್ನು ಪೂರ್ಣಗೊಳಿಸುವುದು.

# 2. ಅಭ್ಯಾಸ ಪುಸ್ತಕ (ಚಿತ್ರಸಹಿತ ಪದಬಂಧ) 23

ಸೂಚನೆ: ಅಭ್ಯಾಸ ಪುಸ್ತಕದಲ್ಲಿ ಮೆಟ್ಟಿಲು ಸಂಖ್ಯೆ 23 ನ್ನು ಪೂರ್ಣಗೊಳಿಸುವುದು.

## 2. ರಾಜಿಯ ಹೊಲ (ವಾಚಕ) 25

ರಾಜಿಯ ಶಾಲೆಗೆ ರಜವಿಹುದು
ರಾಜಿಯು ಬೇಗನೆ ಏಳುವಳು

ತಾಯಿಯು ಅಡುಗೆ ಮುಗಿಸಿಹಳು
ರಾಜಿಯು ಹೊಲಕೆ ಹೊರಟಿಹಳು

ಬಾಳೆಯ ಗಿಡಗಳ ಕಂಡಿಹಳು
ತೂಗುವ ಗೊನೆಯ ಕಾಣುವಳು

ಓಡುವ ಮೊಲವ ಕಂಡಿಹಳು
ಬೊಗಳುವ ಟಾಮಿಯ ಗದರಿದಳು

ಉಳುವ ತಂದೆಯ ಕೂಗುವಳು
ಕೊಳದಲಿ ಕೈಯ ತೊಳೆದಿಹರು

ರಾಜಿಯು ಊಟವ ಬಡಿಸಿದಳು
ಕೊಡದ ಮೊಸರು ನೀಡಿಹಳು

ತಂದೆಯು ಊಟವ ಮಾಡಿಹರು
ಹೊಲದ ಕೆಲಸಕೆ ಹೊರಟಿಹರು

ಹೊಲದಲಿ ಟೊಮೆಟೊ ಬಿಡಿಸಿಹಳು
ಮನೆಯ ಕಡೆಗೆ ಹೊರಟಿಹಳು

ಸೂಚನೆ: ಓದಲು ಕಲಿತ ನಂತರ ನೋಟ್ ಪುಸ್ತಕದಲ್ಲಿ ಬರೆಸುವುದು.

# 2. ಹೊಸ ಕೊಡೆ (ವಾಚಕ) 25

ಒಂದು ದಿನ ಮೀನಳ ಮಾವ ಅವಳಿಗಾಗಿ ಹೊಸ ಕೊಡೆ ತಂದರು. ಕೊಡೆ ಕಂಡ ಮೀನಳಿಗೆ ತುಂಬಾ ಆನಂದವಾಯಿತು.

ಮರುದಿನ ಹೊಸ ಕೊಡೆ ಹಿಡಿದು ಮೀನ ಶಾಲೆಗೆ ಹೊರಟಳು. ಆಗ ಗೆಳತಿ ಸುಮಿ ಮೀನಳ ಕೊಡೆ ಕಂಡು ಬೆರಗಾದಳು.

"ಇದು ನನಗಾಗಿ ಮಾವ ತಂದಿರುವ ಕೊಡೆ" ಎಂದು ಜಂಬದಿಂದ ಹೇಳಿದಳು. ಆಗಲೇ ಮಳೆ ಶುರುವಾಯಿತು.ಮೀನ ಕೊಡೆ ತೆರೆದು ನಡೆದಳು.

ಆಗ ಗಾಳಿ ಬೀಸಿತು. ಗಾಳಿಗೆ ಕೊಡೆ ಮೀನಳ ಕೈಯಿಂದ ಹಾರಿತು. ಮೀನ ಕೊಡೆಯನು ಹಿಡಿಯಲು ಓಡಿದಳು.

ಮೀನಳ ಕೊಡೆ ಹಾರಿ ಗಿಡದ ಮೇಲೆ ಸಿಲುಕಿತು. ಅವಳು ಗಿಡ ಅಲುಗಾಡಿಸಿದಳು. ಎಲೆಗಳ ಮೇಲಿರುವ ಮಳೆಯ ಹನಿಗಳು ಮೈಮೇಲೆ ಉದುರಿದವು. ಗಾಳಿ ರಭಸವಾಗಿ ಬೀಸಿತು.

ಸೂಚನೆ: ಓದಲು ಕಲಿತ ನಂತರ ನೋಟ್ ಪುಸ್ತಕದಲ್ಲಿ ಬರೆಸುವುದು.